**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ,**
ಬೆಂಗಳೂರು–560003

## ದ್ವಿತೀಯ ಪಿಯುಸಿ ಪರೀಕ್ಷೆಗೆ ಸಂಬಂಧಿಸಿದಂತೆ ಸಾಮಾನ್ಯವಾಗಿ ಕೇಳಲಾಗುವ ಪ್ರಶ್ನೆಗಳಿಗೆ ಉತ್ತರಗಳು
## {FREQUENTLY ASKED QUESTIONS (FAQ'S) WITH ANSWERS}

| ಕ್ರ.ಸಂ | ಕೇಳಲಾಗಿರುವ ಪ್ರಶ್ನೆ ಮತ್ತುಉತ್ತರ | |
|---|---|---|
| 01 | **ಪ್ರಶ್ನೆ** | **2023–24 ನೇ ಶೈಕ್ಷಣಿಕ ಸಾಲಿನಲ್ಲಿಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿಯ ವತಿಯಿಂದದ್ವಿತೀಯ ಪಿಯುಸಿಗೆ ಎಷ್ಟು ಪರೀಕ್ಷೆಗಳನ್ನು ನಡೆಸಲಾಗುತ್ತದೆ?** |
| | **ಉತ್ತರ** | ಸರ್ಕಾರಿಆದೇಶ ಸಂಖ್ಯೆ ಇಪಿ 2023 ಎಸ್‌ಎಲ್‌ಬಿ 2023, ದಿನಾಂಕ 21–09–2023 ರನ್ವಯವಾರ್ಷಿಕ ಪರೀಕ್ಷೆ 1, 2 ಮತ್ತು 3ಎಂದು ಹೆಸರಿಸಿ ಮೂರುಪರೀಕ್ಷೆಗಳನ್ನು ನಡೆಸಲಾಗುತ್ತದೆ. |
| 02 | **ಪ್ರಶ್ನೆ** | **ಈ ಹಿಂದೆ ನಡೆಸಲಾಗುತ್ತಿದ್ದ ಪೂರಕ ಪರೀಕ್ಷೆ ನಡೆಯುತ್ತದೆಯೇ?** |
| | **ಉತ್ತರ** | ಇಲ್ಲ. ಆದರೆವಾರ್ಷಿಕ ಪರೀಕ್ಷೆ–1 ರ ನಂತರ, ವಾರ್ಷಿಕ ಪರೀಕ್ಷೆ 2 ಮತ್ತು 3 ಪರೀಕ್ಷೆಗಳು ನಡೆಯುತ್ತವೆ. |
| 03 | **ಪ್ರಶ್ನೆ** | **ವಾರ್ಷಿಕ ಪರೀಕ್ಷೆ–1,2 ಮತ್ತು 3ಎಂದು ಹೆಸರು ಬದಲಾಯಿಸಿರುವುದರ ಹಿಂದಿನ ಉದ್ದೇಶವೇನು?** |
| | **ಉತ್ತರ** | ವಾರ್ಷಿಕ ಪರೀಕ್ಷೆ 1,2 ಮತ್ತು 3 ಮೂಲಕ ವಿದ್ಯಾರ್ಥಿಯಒಟ್ಟಾರೆಕಾರ್ಯಕ್ಷಮತೆ ಮತ್ತು ಸಕಾರಾತ್ಮಕ ಮನೋಭಾವವನ್ನುಉತ್ತೇಜಿಸಬಹುದಾಗಿದೆ. |
| 04 | **ಪ್ರಶ್ನೆ** | **ಈ ಮೂರು ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳು ಏಕರೂಪತೆ ಹೊಂದಿರುತ್ತವೆಯೇ?** |
| | **ಉತ್ತರ** | ಹೌದು. ಮೂರು ಪರೀಕ್ಷೆಗಳಲ್ಲಿ ವಿಷಯ ಮತ್ತುಕಠಿಣತೆಯ ಮಟ್ಟದಲ್ಲಿಏಕರೂಪತೆಹೊಂದಿರುತ್ತವೆ. |
| 05 | **ಪ್ರಶ್ನೆ** | **ವಾರ್ಷಿಕ ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ತರಗತಿ ಹಾಜರಾತಿಕಡ್ಡಾಯವೇ?** |
| | **ಉತ್ತರ** | ಹೌದು. ವಿಷಯವಾರು ಶೇಕಡಾ 75 ರಷ್ಟುಕಡ್ಡಾಯ. |
| 06 | ಪ್ರಶ್ನೆ | ವಿದ್ಯಾರ್ಥಿಯು ಪ್ರಥಮ ಪರೀಕ್ಷೆಗೆ ಹಾಜರಾಗಿ ಮುಂದಿನ ಎರಡು ಪರೀಕ್ಷೆಗಳಿಗೆ ಹಾಜರಾದರೆಯಾವ ಪರೀಕ್ಷೆ ಅಂಕಗಳನ್ನು ಪರಿಗಣಿಸಲಾಗುವುದು? |
| | ಉತ್ತರ | ಮೂರು ಪರೀಕ್ಷೆಗಳಿಗೂ ವಿದ್ಯಾರ್ಥಿ ಹಾಜರಾಗಿದ್ದರೆ, ಅತಿ ಹೆಚ್ಚು ಅಂಕ ಗಳಿಸಿದ್ದನ್ನು ಪರಿಗಣಿಸಲಾಗುವುದು. |

| | | |
|---|---|---|
| 07 | **ಪ್ರಶ್ನೆ** | **ಪುನರಾವರ್ತಿತ ವಿದ್ಯಾರ್ಥಿಗಳು ತಾವು ಇಚ್ಛಿಸಿದ ಯಾವುದಾದರೂಒಂದು ಪರೀಕ್ಷೆ ತೆಗೆದುಕೊಳ್ಳಬಹುದೇ?** |
| | **ಉತ್ತರ** | ಹೌದು. ತೆಗೆದುಕೊಳ್ಳಬಹುದು. |
| 08 | **ಪ್ರಶ್ನೆ** | **ಮೂರು ಪರೀಕ್ಷೆಗಳನ್ನು ಬರೆಯುವ ವಿದ್ಯಾರ್ಥಿಗಳು ಎಷ್ಟು ಬಾರಿಅಂಕಪಟ್ಟಿ ಶುಲ್ಕ ಪಾವತಿಸಬೇಕಾಗುತ್ತದೆ?** |
| | **ಉತ್ತರ** | ಒಂದು ಬಾರಿ. |
| 09 | **ಪ್ರಶ್ನೆ** | **ಪರೀಕ್ಷೆ-1 ರಲ್ಲಿತೇರ್ಗಡೆ ಹೊಂದಿ 2 ಮತ್ತು 3 ನೇ ಪರೀಕ್ಷೆ ತೆಗೆದುಕೊಳ್ಳಲು ಇಚ್ಛಿಸದೇಇರುವ ವಿದ್ಯಾರ್ಥಿಗಳಿಗೆ ಅಂಕಪಟ್ಟಿಗಳನ್ನು ಯಾವಾಗ ವಿತರಿಸಲಾಗುತ್ತದೆ?** |
| | **ಉತ್ತರ** | ಪರೀಕ್ಷೆ-1 ರ ಫಲಿತಾಂಶ ಹಾಗೂ ಮರುಮೌಲ್ಯಮಾಪನ/ಮರುಎಣಿಕೆ ಫಲಿತಾಂಶ ಪ್ರಕಟಿಸಿದ 30 ದಿನಗಳ ನಂತರ ಅಂಕಪಟ್ಟಿಗಳನ್ನು ತಮ್ಮ ಕಾಲೇಜುಗಳ ಪ್ರಾಂಶುಪಾಲರುಗಳ ಮುಖಾಂತರ ವಿತರಿಸಲಾಗುವುದು. |
| 10 | **ಪ್ರಶ್ನೆ** | **ಮುಂದಿನ ವ್ಯಾಸಂಗಕ್ಕಾಗಿ ವಿದ್ಯಾರ್ಥಿಗಳುತುರ್ತಾಗಿಯಾವರೀತಿಯಲ್ಲಿಅಂಕಪಟ್ಟಿಯನ್ನು ಪಡೆಯಬಹುದು?** |
| | **ಉತ್ತರ** | ಪ್ರತಿ ಪರೀಕ್ಷೆ ಫಲಿತಾಂಶ ಪ್ರಕಟಿಸಿದ ನಂತರ ವಿದ್ಯಾರ್ಥಿಗಳು ಪಡೆದ ಅಂಕಗಳನ್ನು ಡಿಜಿಲಾಕರ್‌ನಲ್ಲಿಪಡೆಯಬಹುದಾಗಿದೆ. |
| 11 | **ಪ್ರಶ್ನೆ** | **ಫಲಿತಾಂಶತಿರಸ್ಕರಣೆ ಈ ಹಿಂದಿನ ವರ್ಷಗಳಂತೆಯೇ ಮಾಡಬಹುದೇ?** |
| | **ಉತ್ತರ** | ಫಲಿತಾಂಶ ಉತ್ತಮಪಡಿಸಿಕೊಳ್ಳಲು ಅವಕಾಶ ಕಲ್ಪಿಸಿರುವುದರಿಂದ ಫಲಿತಾಂಶತಿರಸ್ಕರಣೆ ಪ್ರಶ್ನೆಉದ್ಭವಿಸುವುದಿಲ್ಲ. |
| 12 | **ಪ್ರಶ್ನೆ** | **ದ್ವಿತೀಯ ಪಿಯುಸಿ ವೇಳಾಪಟ್ಟಿಯನ್ನು ಪ್ರಕಟಿಸಲಾಗಿದೆಯೇ?** |
| | **ಉತ್ತರ** | ಹೌದು, ವೇಳಾಪಟ್ಟಿಯನ್ನು ಪ್ರಕಟಿಸಲಾಗಿದೆ. |
| 13 | **ಪ್ರಶ್ನೆ** | **ವಾರ್ಷಿಕ ಪರೀಕ್ಷೆ-1 ರಲ್ಲಿ ಪ್ರಾಯೋಗಿಕ ಪರೀಕ್ಷೆ ನಡೆಸಿದಂತೆ, 2 ಮತ್ತು 3 ರ ಪರೀಕ್ಷೆಯಲ್ಲಿ ಪ್ರಾಯೋಗಿಕ ಪರೀಕ್ಷೆ ನಡೆಸಲಾಗುತ್ತದೆಯೇ?** |
| | **ಉತ್ತರ** | ಇಲ್ಲ. ವಾರ್ಷಿಕ ಪರೀಕ್ಷೆ-1 ರಲ್ಲಿ ಮಾತ್ರ ಪ್ರಾಯೋಗಿಕ ಪರೀಕ್ಷೆನಡೆಸಲಾಗುತ್ತದೆ. ಅಲ್ಲಿ ಪಡೆದ ಅಂಕಗಳು ಮುಂದಿನ ಪರೀಕ್ಷೆಗಳಿಗೆ ಅನ್ವಯಿಸುತ್ತವೆ. |
| 14 | **ಪ್ರಶ್ನೆ** | **ಆಂತರಿಕ ಮೌಲ್ಯಮಾಪನದಲ್ಲಿ ಪಡೆದ ಅಂಕಗಳನ್ನು ಉತ್ತಮಪಡಿಸಿಕೊಳ್ಳಲು (Improvement) ಅವಕಾಶವಿದೆಯೇ?** |
| | **ಉತ್ತರ** | ಇಲ್ಲ. ಒಮ್ಮೆಆಂತರಿಕ ಮೌಲ್ಯಮಾಪನದಲ್ಲಿ ಪಡೆದ ಅಂಕಗಳನ್ನು ಮುಂದಿನ |

| | | |
|---|---|---|
| | | ಎಲ್ಲಾಪರೀಕ್ಷೆಗಳಿಗೂಅನ್ವಯವಾಗುತ್ತವೆ. |
| 15 | ಪ್ರಶ್ನೆ | **ಪರೀಕ್ಷೆ –1 ರಲ್ಲಿ ಕೆಲವು ವಿಷಯಗಳಲ್ಲಿ ಅನುತ್ತೀರ್ಣರಾಗಿ, ಪರೀಕ್ಷೆ–2 ಅಥವಾ ಪರೀಕ್ಷೆ–3 ರಲ್ಲಿ ಉಳಿದ ಎಲ್ಲಾ ವಿಷಯಗಳಲ್ಲೂ ಉತ್ತೀರ್ಣರಾದ ವಿದ್ಯಾರ್ಥಿಗಳ ಅಂಕಪಟ್ಟಿಯಲ್ಲಿಏನೆಂದು ನಮೂದಾಗುವುದು?** |
| | ಉತ್ತರ | ಅಂತಿಮವಾಗಿಎಲ್ಲಾ ವಿಷಯಗಳಲ್ಲೂ ಉತ್ತೀರ್ಣಗೊಂಡ ಪರೀಕ್ಷೆಯ ಮಾಹೆ ಮತ್ತು ಪರೀಕ್ಷೆಯ ಸಂಖ್ಯೆಯನ್ನು ನಮೂದಿಸಲಾಗುವುದು. |
| 16 | ಪ್ರಶ್ನೆ | **ಕಲಿಕಾ ನ್ಯೂನತೆಯಿರುವ ಮಕ್ಕಳಿಗೆ/ವಿಕಲಚೇತನ ಮಕ್ಕಳಿಗೆ ಯಾವ ಸೌಲಭ್ಯವನ್ನು ನೀಡಲಾಗುತ್ತಿದೆ?** |
| | ಉತ್ತರ | ಸರ್ಕಾರಿ ಆದೇಶಗಳನ್ವಯ ಕಳೆದ ವರ್ಷಗಳಲ್ಲಿ ನೀಡುತ್ತಿದ್ದ ಭಾಷಾ ವಿಷಯಗಳಲ್ಲಿ ವಿನಾಯಿತಿ, ಬರಹಗಾರರ/ಓದುಗಾರರ ಸೌಲಭ್ಯ ಹಾಗೂ ಪರೀಕ್ಷೆ ಬರೆಯಲು ಹೆಚ್ಚುವರಿ ಕಾಲಾವಕಾಶ ನೀಡಲಾಗುತ್ತಿದೆ. |
| 17 | ಪ್ರಶ್ನೆ | **2023–24 ನೇ ಸಾಲಿನಲ್ಲಿನ ದ್ವಿತೀಯ ಪಿಯುಸಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳ ವಿನ್ಯಾಸ ಬದಲಾಗಿದೆಯೇ?** |
| | ಉತ್ತರ | ಹೌದು. ಪ್ರಯೋಗ ತರಗತಿಗಳನ್ನೊಳಗೊಂಡ ವಿಷಯಗಳಲ್ಲಿ ಈ ಹಿಂದಿನಂತೆ 70 ಅಂಕಗಳಿಗೆ ತಾತ್ವಿಕ ಪರೀಕ್ಷೆ ಹಾಗೂ 30 ಅಂಕಗಳಿಗೆ ಪ್ರಾಯೋಗಿಕ ಪರೀಕ್ಷೆ ನಡೆಯುತ್ತದೆ. ಆದರೆ ಪ್ರಯೋಗೇತರ ವಿಷಯಗಳಲ್ಲಿ 80 ಅಂಕಗಳಿಗೆ ತಾತ್ವಿಕ ಪರೀಕ್ಷೆ ಮತ್ತು 20 ಅಂಕಗಳಿಗೆ ಆಂತರಿಕ ಮೌಲ್ಯಮಾಪನ ನಡೆಯುತ್ತದೆ. |
| 18 | ಪ್ರಶ್ನೆ | **ಫ್ರೆಂಚ್ ಭಾಷಾ ವಿಷಯದಲ್ಲಿ ಮೌಖಿಕ ಪರೀಕ್ಷೆ ನಡೆಯುತ್ತದೆಯೇ?** |
| | ಉತ್ತರ | ಇಲ್ಲ. ಮೌಖಿಕ ಪರೀಕ್ಷೆಗೆ ನಿಗದಿಯಾಗಿದ್ದ 20 ಅಂಕಗಳನ್ನು ಆಂತರಿಕ ಮೌಲ್ಯಮಾಪನಕ್ಕೆ ನೀಡಲಾಗಿದೆ. |
| 19 | ಪ್ರಶ್ನೆ | **ಪರೀಕ್ಷೆ–1 ರಲ್ಲಿಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪುನಃ ಪರೀಕ್ಷೆಗೆ ನೋಂದಾಯಿಸಲು ಎಷ್ಟು ಅವಕಾಶಗಳಿವೆ?** |
| | ಉತ್ತರ | ಅನಿಯಮಿತ ಅವಕಾಶಗಳಿವೆ. |
| 20 | ಪ್ರಶ್ನೆ | **ಖಾಸಗಿ ಅಭ್ಯರ್ಥಿಗಳು ಮತ್ತು ಪುನರಾವರ್ತಿತ ವಿದ್ಯಾರ್ಥಿಗಳಿಗೆ ಎಷ್ಟು ಅಂಕಗಳಿಗೆ ಪ್ರಶ್ನೆಪತ್ರಿಕೆಯನ್ನು ನೀಡಲಾಗುವುದು?** |
| | ಉತ್ತರ | ಹೊಸ/ರೆಗ್ಯುಲರ್ ವಿದ್ಯಾರ್ಥಿಗಳಿಗೆ ನೀಡಿದ 80 ಅಂಕಗಳ ಪ್ರಶ್ನೆಪತ್ರಿಕೆಯನ್ನೇ ಖಾಸಗಿ ಹೊಸಬರು ಹಾಗೂ ಖಾಸಗಿ ಪುನರಾವರ್ತಿತ ಅಭ್ಯರ್ಥಿಗಳಿಗೆ ನೀಡಲಾಗುವುದು. |

| | | |
|---|---|---|
| 21 | **ಪ್ರಶ್ನೆ** | **ಹಾಗಾದರೆ ಖಾಸಗಿ ವಿದ್ಯಾರ್ಥಿಗಳು ಪ್ರತಿ ವಿಷಯದಲ್ಲಿ ಎಷ್ಟು ಅಂಕಗಳಿಗೆ ಪರೀಕ್ಷೆ ಬರೆಯಬೇಕು?** |
| | **ಉತ್ತರ** | ಪ್ರಾಯೋಗಿಕವಲ್ಲದ ವಿಷಯಗಳನ್ನು ಆಯ್ಕೆ ಮಾಡಿಕೊಂಡಿರುವ ಖಾಸಗಿ ಅಭ್ಯರ್ಥಿಗಳು 80 ಅಂಕಗಳಿಗೆ ಪರೀಕ್ಷೆ ಬರೆಯಬೇಕಿದೆ. ಈ ಅಭ್ಯರ್ಥಿಗಳು ಗಳಿಸಿದ ಅಂಕಗಳನ್ನು 100 ಅಂಕಗಳಿಗೆ ಸ್ಕೇಲ್‌ಅಪ್ ಮಾಡಲಾಗುವುದು. |
| 22 | **ಪ್ರಶ್ನೆ** | **ಖಾಸಗಿ ಅಭ್ಯರ್ಥಿಗಳಿಗೆ ಆಂತರಿಕ ಮೌಲ್ಯಮಾಪನ ಅಂಕಗಳು ಇರುತ್ತವೆಯೇ?** |
| | **ಉತ್ತರ** | ಇಲ್ಲ |
| 23 | **ಪ್ರಶ್ನೆ** | **ವಾರ್ಷಿಕ ಪರೀಕ್ಷೆ–1, 2 ಮತ್ತು 3 ರ ಸಂಬಂಧ ವಿದ್ಯಾರ್ಥಿಗಳು ಎಷ್ಟು ಬಾರಿ ಶುಲ್ಕ ಪಾವತಿಸಬೇಕು?** |
| | **ಉತ್ತರ** | ವಾರ್ಷಿಕ ಪರೀಕ್ಷೆ–1 ಕ್ಕೆ ಹೊಸಬರು, ಪುನರಾವರ್ತಿತ ವಿದ್ಯಾರ್ಥಿಗಳು ಹಾಗೂ ಖಾಸಗಿ ಅಭ್ಯರ್ಥಿಗಳು ನಿಗದಿತ ಶುಲ್ಕ ಪಾವತಿಸಬೇಕು. ಆದರೆ ವಾರ್ಷಿಕ ಪರೀಕ್ಷೆ 2 ಮತ್ತು 3 ನ್ನು ತೆಗೆದುಕೊಳ್ಳುವ ಅನುತ್ತೀರ್ಣ ವಿದ್ಯಾರ್ಥಿಗಳು ಹಾಗೂ ಫಲಿತಾಂಶ ಸುಧಾರಣೆ ಬಯಸುವ ವಿದ್ಯಾರ್ಥಿಗಳು ಮಾತ್ರ ನಿಗದಿತ ಶುಲ್ಕ ಪಾವತಿಸಬೇಕು. |